ಈಗಾಗಲೇ ಚುನಾಯಿತರಾದಂತಹ ಡೈರಕ್ಟರರೇ ಆ ಮಂಡಳಿಯ ಡೈರಕ್ಟರ್ ಆಗಿ ಇರುವ ಹಾಗೆ ಮಾಡುತ್ತೀರಾ ಎಂಬುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಎರಡನೆಯದಾಗಿ, ವಿಭಜನೆಯಾಗುವವರೆಗೆ ಈಗ ಇರುವ ಡಿ ಸಿ ಸಿ ಬ್ಯಾಂಕ್‌ಗೆ ಹೊಸ ನೇಮೂಣೆಕೆಯಾಗದ ರೀತಿಯಲ್ಲಿ ತಾವು ನೋಡಿಕೊಳ್ಳುತ್ತೀರಾ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಪಂಚಾಯತ್ ರಾಜ್ ಕಾನೂನು ಬೇರೆ, ಸಹಕಾರ ಕಾನೂನೇ ಬೇರೆಯಾಗುತ್ತದೆ. ಸಹಕಾರಿ ಕಾನೂನಿನಡಿಯಲ್ಲಿ ಏನು ಇದೆ, ಆ ರೀತಿಯಲ್ಲಿ ಮಾಡುತ್ತೇವೆ. ಮಾನ್ಯ ಸದಸ್ಯರು ಇದಕ್ಕೆ ತಿದ್ದುಪಡಿ ತರುತ್ತೀರಾ ಎಂದು ಕೇಳಿದ್ದಾರೆ. ನಾವು ಸದನದಲ್ಲಿ ತಿದ್ದುಪಡಿಯನ್ನು ಮಂಡಿಸಿದ್ದೇವೆ. ಆ ತಿದ್ದುಪಡಿ ಮಂಜೂರಾದರೆ ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಿಯವರೆಗೆ ನೇಮಕಗಳನ್ನು ನಿಲ್ಲಿಸುತ್ತೀರಾ ಎಂದು ಕೇಳಿದ್ದಾರೆ, ಅದನ್ನು ನಾವು ನಿಲ್ಲಿಸುವುದಕ್ಕಾಗುವುದಿಲ್ಲ. ಅಲ್ಲಿ ಅವಶ್ಯಕವಾದಂತಹ ಸಿಬ್ಬಂದಿಗಳನ್ನು ನಾವು ಕೊಡಬೇಕಾಗುತ್ತದೆ. ಆದುದರಿಂದ ನಿಲ್ಲಿಸುವಂತಹ ಪರಿಸ್ಥಿತಿ ಉದ್ಭವವಾಗುವುದಿಲ್ಲ.

ವಿಟ್ಲದಿಂದ ಬೆಂಗಳೂರಿಗೆ ಅಲ್ಟ್ರಾ ಡೀಲಕ್ಸ್ ಬಸ್ ಸೇವೆಗಳು

183 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಟ್ಲದಿಂದ ಬೆಂಗಳೂರಿಗೆ ರಾತ್ರಿ ವೇಳೆ ಒಂದು ಅಲ್ಟ್ರಾ ಡೀಲಕ್ಸ್ ಬಸ್ಸು ಸರ್ವಿಸ್ ಪ್ರಾರಂಭಿಸುವ ಅಗತ್ಯದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಇದನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಉಪಾಧ್ಯಕ್ಷರೆ, ನಾನು ಮೂರು ಸಾರಿಯಿಂದಲೂ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನನಗೆ ಪ್ರತಿಸಾರಿಯೂ ನೆಗೆಟೀವ್ ಉತ್ತರವೇ ಬರುತ್ತದೆ, ಪಾಸಿಟೀವ್ ಉತ್ತರ ಬರುತ್ತಾ ಇಲ್ಲ. ನಾನು ಏನು ದೊಡ್ಡ ಪ್ರಶ್ನೆಯನ್ನು ಕೇಳಿಲ್ಲ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವಿಟ್ಲದಿಂದ ಬೆಂಗಳೂರಿಗೆ ಒಂದು ಸೂಪರ್ ಡೀಲಕ್ಸ್ ಬಸ್ಸನ್ನು ಪ್ರಾರಂಭ ಮಾಡಬೇಕೆಂದು ಕೇಳಿದ್ದೇನೆ. ಇದರ ಬಗ್ಗೆ ಸರಿಯಾದಂತಹ ಉತ್ತರವನ್ನು ತಾವು ಕೊಟ್ಟಿಲ್ಲ. ನಮ್ಮ ಕ್ಷೇತ್ರ ಕೇರಳ ಮತ್ತು ಕರ್ನಾಟಕ ರಾಜ್ಯದ ಗಡಿ ಪ್ರದೇಶವಾಗಿದೆ. ನಾವು ಬಸ್ಸಿಗೆ ಬರಬೇಕೆಂದರೆ ಮಂಗಳೂರು ಅಥವಾ ಪುತ್ತೂರಿಗೆ ಹೋಗಬೇಕು. ಅದರ ಮಧ್ಯದಲ್ಲಿ ವಿಟ್ಲ ಕ್ಷೇತ್ರವಿದೆ. ಅದಕ್ಕಾಗಿ ಅನಿವಾರ್ಯವಾಗಿ ಮತ್ತು ಅಗತ್ಯವಾಗಿ ವಿಟ್ಲದಿಂದ ಒಂದು ಬಸ್ಸು ಪ್ರಾರಂಭ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಸಾರಿಗೆ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ಈಗ ಒಂದು ಬಸ್ಸು ವಿಟ್ಲ ನಗರದ ಮುಖಾಂತರ ಬೆಂಗಳೂರು ಕಾಸರಗೋಡು ಎಂದು ಒಂದು ಎಕ್ಸ್‌ಪ್ರೆಸ್ಸ್ ಸರ್ವೀಸ್ ಇದೆ. ಅದು ಬೆಂಗಳೂರಿನಿಂದ ರಾತ್ರಿ 9.30 ಗಂಟೆಗೆ ಹೊರಟು ಕಾಸರಗೋಡನ್ನು ಬೆಳಿಗ್ಗೆ 7.45ಗಂಟೆಗೆ ತಲುಪುತ್ತದೆ.ಇದು ವಿಟ್ಲಕ್ಕೆ ತಲುಪುವ ಸಮಯ 7 ಗಂಟೆಗೆ ಮತ್ತೆ ಕಾಸರಗೋಡಿನಿಂತ ರಾತ್ರಿ 7.15ಗಂಟೆಗೆ ಬಿಟ್ಟರೆ ಅದು ಬೆಂಗಳೂರನ್ನು ಮಾರನೇ ದಿವಸ ಬೆಳಿಗ್ಗೆ 5.45 ಗಂಟೆಗೆ ಬಂದು ತಲುಪುತ್ತದೆ. ಇದಕ್ಕಿಂತ ಮುಂಚೆ ಡೀಲೆಕ್ಸ್ ಬಸ್ ಆಪರೇಟ್ ಆಗುತ್ತಾ ಇತ್ತು. ಆದರೆ ಅದಕ್ಕೆ ಪ್ರಯಾಣಿಕರ ಸಂಖ್ಯೆ ಕೂಡ ಕಡಿಮೆಯಾಗಿದ್ದರಿಂದ, ಅದರ ಸೌಲಭ್ಯವನ್ನು ಪಡೆಯಲು ಪ್ರಯಾಣಿಕರು ಪಡೆಯಲು ಮುಂದೆ ಬರಲಿಲ್ಲ. ಆ ಸಂದರ್ಭದಲ್ಲಿ ಡೀಲಕ್ಸ್ ಬಸ್ಸನ್ನು ಎಕ್ಸ್‌ಪ್ರೆಸ್ ಬಸ್ಸಾಗಿ ಕನ್‌ವರ್ಟ್ ಮಾಡಿದ್ದೇವೆ. ಈಗ ಈ ಬಸ್ಸು ಓಡಾಡುತ್ತಾ ಇದೆ. ಇನ್ನು ಮಾನ್ಯ ಸದಸ್ಯರು ಕೇಳಿರುವಂಥಾದ್ದು ಅವರ ಕ್ಷೇತ್ರವಾದ ವಿಟ್ಲ ಕ್ಷೇತ್ರದಿಂದ ನೇರವಾಗಿ ಬೆಂಗಳೂರಿಗೆ ಒಂದು ಬಸ್ಸು ಕೊಡಿ ಎಂದು ಕೇಳುತ್ತಿದ್ದಾರೆ. ಅವರು ಕೇಳುವುದರಲ್ಲಿ ತಪ್ಪು ಇಲ್ಲ. ಅವರು ಬರುವಂತಹ ಸಂದರ್ಭದಲ್ಲಿ ಅವರ ಕ್ಷೇತ್ರ ಗಡಿಪ್ರದೇಶವಾಗಿರುವುದರಿಂದ ಬೆಂಗಳೂರಿನಿಂದ ವಿಟ್ಲಕ್ಕೆ ನೇರವಾಗಿ ಒಂದು ಬಸ್ಸು ಕೊಡಿ ಎಂದು ಕೇಳಿದ್ದಾರೆ. ಆದರೆ ಕೆಲವು ಸಂದರ್ಭದಲ್ಲಿ ಬಸ್ಸುಗಳನ್ನು ಹಾಕಬೇಕಾದರೆ ಎಕನಾಮಿಕಲಿ ನಾವು ವರ್ಕ್ ಔಟ್ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಅಲ್ಟ್ರಾ ಡಿಲಕ್ಸ್ ಬಸ್ಸು ಹಾಕಬೇಕೆಂದು ಕೇಳಿದ್ದಾರೆ. ಆದುದರಿಂದ ಇದರ ಎಕನಾಮಿಕಲಿ ವರ್ಕ್ ಔಟ್ ಮಾಡಿದರೆ ಬ್ರೇಕ್ ಇವನ್ ಆಗುತ್ತದೆನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ನೇರವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ಕ್ಷೇತ್ರದಿಂದ ಬೆಂಗಳೂರಿಗೆ ಬರುವುದಕ್ಕೆ ಗಡಿ ಪ್ರದೇಶವಾಗಿರುವುದರಿಂದ ಬಸ್ಸು ಕೊಡುವಂತಹ ಅವಶ್ಯಕತೆ ಇದೆಯೆಂದು ಹೇಳಿದ್ದಾರೆ. ಇದರ ಬಗ್ಗೆ ಸರ್ವೆ ಮಾಡುವಂತಹ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಅದನ್ನು ಸರ್ವೆ ಮಾಡಿ ಇದರ ಫೀಜಿಬಿಲಿಟಿಯನ್ನು ವರ್ಕ್‌ಔಟ್ ಮಾಡಿ ಮಾನ್ಯ ಸದಸ್ಯರು ಎತ್ತಿರುವಂತಹ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಏನು ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ.

ಸಾವಯವ ಗೊಬ್ಬರದ ಬಳಕೆ

184 - ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಾವಯವ ಗೊಬ್ಬರ ಬಳಕೆಯಿಂದ ರೈತರ ಉತ್ಪಾದಕತೆಯ ಮೇಲಾಗುವ ಪರಿಣಾಮ ಕುರಿತು ವೈಜ್ಞಾನಿಕ ಅಧ್ಯಯನ ನಡೆದಿದೆಯೇ ನಡೆದಿದ್ದರೆ ವಿವರ ನೀಡಿರಿ.*

ಆ) *ಸಾವಯವ ಕೃಷಿ ಪದ್ಧತಿಯಲ್ಲಿ ರೈತನ ವೆಚ್ಚ ತಗ್ಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಇ) *ಸಾವಯವ ಗೊಬ್ಬರ ಬಳಕೆ ಪದ್ಧತಿ ಜನಪ್ರಿಯಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?*